| | | |
|---|---|---|
| 3. | ಉಡುಪಿ ತಾಲ್ಲೂಕು ಹೆಜಮಾಡಿ ಕೋಡಿ 100 ಮೀ. | ಸುಮಾರು 20 ಮೀ. ಅಗಲಕ್ಕೆ ಭೂ ಪ್ರದೇಶವು, 12 ತೆಂಗಿನ ಮರಗಳು ನಾಶವಾಗಿವೆ. 50 ಮೀ. ಉದ್ದಕ್ಕೆ ರಸ್ತೆಯು ನೀರು ಪಾಲಾಗಿರುತ್ತದೆ. |
| 4. | -ಅದೇ- ಬಡ ಉಚ್ಚಿಲ 320 ಮೀ. | ಸುಮಾರು 30 ಮೀ. ಅಗಲಕ್ಕೆ ಭೂ ಪ್ರದೇಶವು ಸಮುದ್ರ ಪಾಲಾಗಿದ್ದು 30 ತೆಂಗಿನ ಮರಗಳು ಉರುಳಿ ಬಿದ್ದಿರುತ್ತದೆ. |
| 5. | -ಅದೇ- ಉಳಿಯಾರಗೋಳಿ ಪಡುಕೆರೆ 200 ಮೀ. | ಸುಮಾರು 10 ಮೀಟರ್ ಅಗಲಕ್ಕೆ ಭೂ ಪ್ರದೇಶವು ಸಮುದ್ರ ಪಾಲಾಗಿದ್ದು 200 ಮೀ. ಉದ್ದದ ಮೀನುಗಾರಿಕಾ ರಸ್ತೆಯು ಭಾಗಶ: ಹಾನಿಗೊಂಡಿದೆ. |
| 6. | -ಅದೇ- ಅಡ್ಡಬೆಂಗ್ರೆ 300 ಮೀ. | ಸುಮಾರು 15 ಮೀ.ರಿಂದ 20 ಮೀ. ಅಗಲಕ್ಕೆ ಭೂ ಪ್ರದೇಶವು ಸಮುದ್ರ ಪಾಲಾಗಿದೆ. |
| 7. | -ಅದೇ- ಕೋಡಿಬೆಂಗ್ರೆ 920ಮೀ. | ಸುಮಾರು 15 ರಿಂದ 20 ಮೀ. ಅಗಲಕ್ಕೆ ಭೂ ಪ್ರದೇಶರು ಸಮುದ್ರ ಪಾಲಾಗಿದ್ದು 51 ತೆಂಗಿನ ಮರಗಳು ಮತ್ತು 37 ಗಾಳಿ ಮರಗಳು ಸಮುದ್ರ ಪಾಲಾಗಿವೆ. ಒಟ್ಟು 14 ಜನರ ಆಸ್ತಿ ಪಾಸ್ತಿಗಳಿಗೆ ಹಾನಿ ಉಂಟಾಗಿದೆ. |
| 8. | ಕುಂದಾಪುರ ತಾಲ್ಲೂಕು ಕಸಬಾ ಕೋಡಿ 200 ಮೀ. | ಮೀನುಗಾರಿಕಾ ರಸ್ತೆಯು ಅಪಾಯದ ಹಂತದಲ್ಲಿದೆ. ಕರ್ನಾಟಕ ವಿದ್ಯುತ್ ಮಂಡಳಿಯ ಒಂದು ಟ್ರಾನ್ಸ್‌ಫಾರ್ಮರ್ ಕುಸಿಯುವ ಹಂತದಲ್ಲಿದೆ. |
| 9. | -ಅದೇ- ಗುಜ್ಜಾಡಿ 75 ಮೀ. | ಈ ಸ್ಥಳದಲ್ಲಿರುವ ಮೀನುಗಾರರ ಹಾಗೂ ಪರಿಶಿಷ್ಟ ಜಾತಿಗೆ ಸೇರಿದವರ ಮನೆಗಳು ಮತ್ತು ಗುಡಿಸಲುಗಳು ಕೂಡ ಅಪಾಯದ ಅಂಚಿನಲ್ಲಿದೆ. |

**ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಸ್ತೆಗಳ ದುರಸ್ತಿಯ ಬಗ್ಗೆ**

1918 -ಶ್ರೀ ಪಿ. ಬಸವರಾಜ್(ಬ್ರಹ್ಮಾವರ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) *ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಪರೀತ ಮಳೆಯಿಂದಾಗಿ ರಸ್ತೆಯಗಳೆಲ್ಲಾ ಮೂಲ ಸ್ವರೂಪ ಕಳೆದುಕೊಂಡಿರುವುದು ನಿಜವಲ್ಲವೆ:*

ಆ) *ಇದರಿಂದ ಸಾರ್ವಜನಿಕರಿಗೆ ರಸ್ತೆಯ ಮೇಲೆ ಸಂಚಾರಕ್ಕೆ ಮತ್ತು ವಾಹನಗಳ ಓಡಾಟಕ್ಕೆ ಕಷ್ಟಕರ ಪರಿಸ್ಥಿತಿ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ:*

ಇ) ಮಳೆಗಾಲದ ಅಂತ್ಯದ ವೇಳೆಗೆ ವಿಶೇಷ ಅನುದಾನ ಬಿಡುಗಡೆ ಮಾಡಿ ರಸ್ತೆಯಯ ಯಥಾಸ್ಥಿತಿಗೆ ಅನುಕೂಲ ಮಾಡಿಕೊಡುವಲ್ಲಿ ಸರ್ಕಾರ ಯೋಚಿಸಬಹುದೆ?

ಶ್ರೀ ಜಿ. ಹೆಚ್. ಅಶ್ವಥ ರೆಡ್ಡಿ (ಲೋಕೋಪಯೋಗಿ ಸಚಿವರು):

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇತ್ತೀಚಿನ ಅತಿವೃಷ್ಟಿಯಿಂದ ರಸ್ತೆಗಳಿಗೆ ಹಾನಿ ಉಂಟಾಗಿದೆ.

ಆ) ಬಂದಿದೆ.

ಇ) ರಸ್ತೆಗಳ ನಿರ್ವಹಣೆ ಹಾಗೂ ದುರಸ್ತಿಗಾಗಿ ಹೆಚ್ಚುವರಿ ಅನುದಾನ ನೀಡುವ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆ.

**ಉಡುಪಿ ತಾಲ್ಲೂಕು 41ನೇ ಶಿರೂರು ಗ್ರಾಮದ ಉಡುಪಿ ಕಂಬಳದ ಬಳಿ ಚಿಕ್ಕ ಸೇತುವೆ**

1919-ಶ್ರೀ ವಿ. ಬಸವರಾಜ್ (ಬ್ರಹ್ಮಾವರ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಉಡುಪಿ ತಾಲ್ಲೂಕು 41ನೇ ಶಿರೂರು ಗ್ರಾಮದ ಉಡುಪರ ಕಂಬಳದ ಬಳಿಯ ನದಿಗೆ ಚಿಕ್ಕ ಸೇತುವೆಯ ನಿರ್ಮಾಣದ ಅವಶ್ಯಕತೆಯ ಕುರಿತು ಸತತವಾಗಿ ಸಾರ್ವಜನಿಕರಿಂದ ಲೋಕೊಪಯೋಗಿ ಇಲಾಖೆಗೆ ಮನವಿ ಬಂದಿರುವುದ ನಿಜವಲ್ಲವೆ?

ಆ) ಈ ತುರ್ತು ಅವಶ್ಯಕತೆ ಕುರಿತು ಲೋಕೊಪಯೋಗಿ ಇಲಾಖೆ ಕೈಗೊಂಡು ಕ್ರಮಗಳೇನು? ವಿವರ ತಿಳಿಸುವುದು?

ಶ್ರೀ ಜಿ.ಹೆಚ್. ಅಶ್ವಥ ರೆಡ್ಡಿ (ಲೋಕೋಪಯೋಗಿ ಸಚಿವರು):

ಅ) ನಿಜ, ಬಂದಿದೆ.

ಆ) ಸದರಿ ಕಾಮಗಾರಿಯು ಜಿಲ್ಲಾಪರಿಷತ್ ವ್ಯಾಪ್ತಿಯಲ್ಲಿದ್ದು ಅನುದಾನ ದೊರೆತಲ್ಲಿ ಕ್ರಿಯಾಯೋಜನೆಯಲ್ಲಿ ಸೇರಿಸಲಾಗುವುದು.

**ರಾಜ್ಯದಲ್ಲಿರುವ ಲೋಕೋಪಯೋಗಿ ರಸ್ತೆಗಳ ಬಗ್ಗೆ**

1878- ಶ್ರೀ ಪಿ. ಜಿ. ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಯ ಆಡಿಯಲ್ಲಿರುವ ರಾಷ್ಟ್ರೀಯ, ರಾಜ್ಯ ಹಾಗೂ ಜಿಲ್ಲಾ ರಸ್ತೆಗಳ ಸಂಖ್ಯೆ ಎಷ್ಟು?

ಆ) ಇವುಗಳ ನಿರ್ವಹಣೆಗಾಗಿ 1990-91ನೇ ಸಾಲಿನಲ್ಲಿ ಖರ್ಚಾಗಿರುವ ಹಣವೆಷ್ಟು?

ಇ) 1991-92ನೇ ಸಾಲಿನಲ್ಲಿ ಈ ರಸ್ತೆಗಳಿಗಾಗಿ ಖರ್ಚು ಮಾಡುಲುದ್ದೇಶಿಸಿರುವ ಮೊತ್ತ ಎಷ್ಟು ಹಾಗೂ ಈ ಹಣ ಸಾಕಾಗುವುದೇ?

ಶ್ರೀ ಜಿ. ಎಚ್. ಅಶ್ವತ್ಥ ರೆಡ್ಡಿ (ಲೋಕೋಪಯೋಗಿ ಸಚಿವರು) :

ಅ) ರಾಜ್ಯದಲ್ಲಿರುವ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ವಿವರ ಕೆಳಕಂಡಂತಿದೆ :

| | | |
|---|---|---|
| 1. | ರಾಷ್ಟ್ರೀಯ ಹೆದ್ದಾರಿ | 1997 ಕಿ.ಮೀ. |